ದಿನಾಂಕಃ16.01.2024 ರಂದು ಪಿ.ಡಬ್ಲೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀಮತಿ ಎನ್ ಪಿ ವಕೀಲರಿಂದಃ

ದಾವಾ ಸ್ವತ್ತು ನನಗೆ ಹೇಗೆ ಬಂದಿರುತ್ತದೆ ಎಂದರೆ ಖರೀದಿ ಮುಖಾಂತರ. ಯಾರು ಖರೀದಿಸಿರುತ್ತಾರೆ ಎಂದರೆ ನನ್ನ ಗಂಡ. ದಾವಾ ಸರ್ವೆ ನಂಬರ್ ನ ಒಟ್ಟು ವಿಸ್ತೀರ್ಣ 4 ಎಕರೆ ಗುಂಟೆ ಎಷ್ಟು ಎಂದು ಗೊತ್ತಿರುವುದಿಲ್ಲ. ದಾವಾ ಸರ್ವೆ ನಂಬರ್ ನ ಒಟ್ಟು ವಿಸ್ತೀರ್ಣ 5 ಎಕರೆ 14 ಗುಂಟೆ ಎಂದರೆ ಇರಬಹುದು. ದಾವಾ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ನನಗೆ ಮದುವೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಖರೀದಿಸಿದ ನಂತರ ದಾವಾ ಸ್ವತ್ತಿನ ಪಹಣಿ, ಮ್ಯುಟೇಶನ್ ನನ್ನ ಗಂಡನ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ . ನನ್ನ ಗಂಡ ಖರೀದಿಸಿದ ಜಾಗಕ್ಕೆ ಬೇಲಿ ಹಾಕಿ ಮಾವಿನ ಮರಗಳನ್ನು ಬೆಳೆಸಿರುತ್ತಾರೆ ಎಂದರೆ ಸರಿ.

2. 1988 ರಲ್ಲಿ 1 ನೇ ಪ್ರತಿವಾದಿಯ ತಂದೆ 2 ಎಕರೆ 4 ಗುಂಟೆಯನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ಉಳಿದ 2 ಎಕರೆ 4 ಗುಂಟೆಯನ್ನು ದಾವಾ ಸರ್ವೆ ನಂಬರ್ ನಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ. ದಾವಾ ಸರ್ವೆ ನಂಬರ್ ನಲ್ಲಿ 19 ಗುಂಟೆ ಕರಾಬು ಜಮೀನು ಇರುತ್ತದೆ ಎಂದರೆ ಸರಿ. ಸದರಿ ಕರಾಬು ಜಾಗದಲ್ಲಿ 10 ರಿಂದ 13 ಅಡಿಗಳ ಬಂಡಿ ದಾರಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ಇರುವ ದಾರಿಯನ್ನು ಗ್ರಾಮಸ್ಥರು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ಇರುವ ಜಮೀನುಗಳಿಗೆ ಗ್ರಾಮಸ್ಥರು ಹೇಗೆ ತಲುಪುತ್ತಾರೆ ಎಂದರೆ ದಾವಾ ಸ್ವತ್ತಿನ ಪಕ್ಕದಲ್ಲಿ ಬಂಡಿ ದಾರಿ ಇರುತ್ತದೆ, ಅದನ್ನು ಉಪಯೋಗಿಸುತ್ತಾರೆ. ಬಂಡಿ ದಾರಿ ದಾವಾ ಸ್ವತ್ತಿನ ಯಾವ ದಿಕ್ಕಿಗೆ ಇರುತ್ತದೆ ಎಂದರೆ ದಾವಾ ಸ್ವತ್ತಿನ ಪಕ್ಕದಲ್ಲಿ

ಇರುವುದಿಲ್ಲ.

3. ದಾವಾ ಹೂಡುವ ಸಮಯದಲ್ಲಿ ನನ್ನ ಗಂಡ ಬದುಕಿರುವುದಿಲ್ಲ. ನನ್ನ ಗಂಡ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ 2010 ರಲ್ಲಿ. ನನ್ನ ಗಂಡ ಬದುಕಿದ್ದ ಸಮಯದಿಂದಲೂ ದಾವೆ ಹೂಡುವ ಸಮಯದವರೆಗೂ ನನ್ನ ಗಂಡ ಖರೀದಿಸಿರುವ ಜಾಗದಲ್ಲಿ ಬೇಲಿ ಹಾಕಿಕೊಂಡು ಸ್ವಾಧೀನದಲ್ಲಿರುತ್ತೇನೆ ಎಂದರೆ ಸರಿ. ಸದರಿ ಬೇಲಿ ಹಾಕಿಕೊಂಡಿರುವ ಜಾಗಕ್ಕೆ ಯಾರೂ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿ. ಸುಮಾರು 50 ವರ್ಷಗಳಿಂದ ಸದರಿ ಬೇಲಿ ಹಾಕಿಕೊಂಡಿರುವ ಜಾಗದ ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿ. 1 ನೇ ಪ್ರತಿವಾದಿ ತಂದೆ ಖರೀದಿಸಿರುವ ಜಾಗದಲ್ಲಿ ಸುಮಾರು 40 ವರ್ಷಗಳಿಂದ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿ ಖರೀದಿಸಿರುವ ಜಾಗದಲ್ಲಿ ಅವರೇ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ಖರೀದಿಸಿರುವ ಜಾಗಗಳನ್ನು ಭಾಗ ಮಾಡಿಕೊಂಡು ಅವರೇ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

4. ದಾವಾ ಸ್ವತ್ತಿನ ವಿಸ್ತೀರ್ಣದಲ್ಲಿ ನಾವು ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 4 ರ ಪ್ರಕಾರ 27 ಗುಂಟೆ ಜಾಗದಲ್ಲಿ ಮಾತ್ರ ಸ್ವಾಧೀನದಲ್ಲಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 4 ರ ಪ್ರಕಾರ 2 ನೇ ಪ್ರತಿವಾದಿ 1 ಎಕರೆ 2 ಗುಂಟೆ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಸೀನಪ್ಪ ಬಿನ್ ಚಂಗಪ್ಪ ರವರು ಸಹ 1 ಎಕರೆ 2 ಗುಂಟೆ ಜಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ಸದರಿ ಜಾಗದ ಆದಾರದ ಮೇಲೆ ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನನ್ನ ಗಂಡನ ಹೆಸರಿಗೆ 27 ಗುಂಟೆ ಜಾಗಕ್ಕೆ ಮಾತ್ರ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ ಸದರಿ ಖಾತೆಯನ್ನು ತಡೆ ಹಿಡಿಯಬೇಕು ಎಂದು ಏಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಈ ಪ್ರಕರಣ

ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಸ್ವಾಧೀನಕ್ಕೆ ತೊಂದರೆ ಕೊಡದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾರಿಗಾಗಿ ತೊಂದರೆ ಕೊಟ್ಟಿರುತ್ತಾರೆ. ದಾವಾ ಸರ್ವೆ ನಂಬರ್ ನಲ್ಲಿರುವ ಕರಾಬು ಜಾಗವನ್ನು ಗ್ರಾಮಸ್ಥರು ದಾರಿಗಾಗಿ ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾರಿಯನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕಿರುವ ದಾರಿಯನ್ನೇ ಗ್ರಾಮಸ್ಥರು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-
(ಶ್ರೀಮತಿ ಸ್ನೇಹಾ ಎಂ.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು